ಬಿ ಪಾಸಿಟಿವ್

ಸಮಸ್ಯೆಗಳಿಗೆ ಹೆದರದಿರಿ ಹೆದರಿಸಿರಿ

ಜೀವನ ಅಂದ ಮೇಲೆ ಸುಖ ದು:ಖ, ನೋವು ನಲಿವು ಸಹಜ ಅವುಗಳನ್ನು ಸಮನಾಗಿ ಸ್ವೀಕರಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಸುಖ ಬಂದಾಗ ಹಿಗ್ಗದೇ, ದು:ಖ ಬಂದಾಗ ಕುಗ್ಗದೇ ಮುನ್ನಡೆಯಬೇಕು. ಸಮಸ್ಯೆಗಳು ಬದುಕಿನ ಒಂದು ಭಾಗ. ಸಮಸ್ಯೆಗಳು ಇಲ್ಲದ ಮನುಷ್ಯರು ಭೂಮಿಯ ಮೇಲೆ ಇಲ್ಲ. ಅವುಗಳ ಸ್ವರೂಪ ಮಾತ್ರ ಭಿನ್ನ ಭಿನ್ನವಾಗಿರಬಹುದು. ಸಮಸ್ಯೆ ಬಂದಾಗ ಹೆದರದೆ, ಅವುಗಳನ್ನು ಎದುರಿಸಿ ಬಗೆಹರಿಸಿಕೊಳ್ಳುತ್ತಾ ಮುನ್ನಡೆಯಬೇಕು. ಆಗಿನ ಅನುಭವ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಧೈರ್ಯ ನೀಡುವುದು. ಕೆಲವರಿಗೆ ಓದಿನ ಸಮಸ್ಯೆ, ಹಲವರಿಗೆ ಉದ್ಯೋಗದ ಸಮಸ್ಯೆ, ಇನ್ನು ಕೆಲವರಿಗೆ ಹಣದ,

ಆರೋಗ್ಯದ ಸಮಸ್ಯೆ. ಇನ್ನೂ ಕೆಲವರಿಗೆ ಅಧಿಕಾರ, ಅಂತಸ್ತು, ಆಸ್ತಿಯ ಸಮಸ್ಯೆ. ಸಮಸ್ಯೆಯ ಮುಖಗಳು ಸಾವಿರಾರು. ಅವುಗಳನ್ನು ಖುಷಿಯಿಂದ ಎದುರಿಸುವ ಕಲೆ ರೂಢಿಸಿಕೊಂಡರೆ ಬದುಕು ಸಹ್ಯ ಎನಿಸುತ್ತದೆ. ಒಬ್ಬರಿಗೆ ಸಮಸ್ಯೆ ಎನಿಸಿದ್ದು ಕೆಲವರಿಗೆ ಅವಕಾಶ ಆಗಬಹುದು. ಕೆಲವರಿಗೆ ಚಿಕ್ಕ ಸಮಸ್ಯೆಯನ್ನು ದೊಡ್ಡದಾಗಿ ಮಾಡಿ ಕೊಳ್ಳುವರು ಯಾರೋ ಆಡಿದ ಒಂದು ಮಾತಿನಿಂದ ಒಂದು ರಂಪಾಟ ಮಾಡಿ ಕೊಳ್ಳುವರು. ಹೀಗಾಗಿ ನಿತ್ಯ ಬದುಕಿನಲ್ಲಿ ಒಂದು ಸಮಸ್ಯೆ ಬಗೆ ಹರಿದರೆ ಮತ್ತೊಂದು ಸಮಸ್ಯೆ ಹುಟ್ಟುವುದು ಸಹಜ. ಕಾಲ ಚಕ್ರದಲ್ಲಿ ಹಗಲು ರಾತ್ರಿಗಳು ಎಂಬಂತೆ ಸುಖ ದುಖಗಳು ಕಾಲಚಕ್ರದಂತೆ ಪ್ರತಿಯೊಬ್ಬರ ಬದುಕಿ ನಲ್ಲಿ ಬರುತ್ತವೆ ಹೋಗುತ್ತವೆ. ನಾವು ಗಳಿಸುವ ಹಣ, ಅಂತಸ್ತು ಕೀರ್ತಿ ಯಾವುದು ಶಾಶ್ವತವಲ್ಲ. ಈ ಜೀವನವೇ ಶಾಶ್ವತವಲ್ಲ ಎಂದಾಗ ಪಡೆಯುವ ಭೌತಿಕ ವಸ್ತುಗಳು ಗಳಿಸುವ ಸಂಪತ್ತು ಶಾಶ್ವತವಲ್ಲ ಅಲ್ಲವೇ? ಹೀಗಾಗಿ ನಾವೂ ಜೀವನದಲ್ಲಿ ಗೆದ್ದಾಗಲೂ ಗೆಲುವಿನ ಅಹಂ ತಲೆಗೇರಿಸಿಕೊಳ್ಳಬಾರದು, ಸೋತಾಗ ಕುಗ್ಗಿ ಹೋಗಬಾರದು. ಗೆಲುವು ಒಂದು ಅನುಭವ ನೀಡಿದರೆ ಸೋಲು ಮತ್ತೊಂದು ಅನುಭವ ನೀಡುವುದು.

• ರಂಗನಾಥ ಎನ್ ವಾಲ್ಮೀಕಿ

ಲವ್‌ಎವೆರಿ ಬಾಡಿ

ಯಾರಾದರೂ ಪರಿಚಯಸ್ಥರು ಸಿಕ್ಕೊಡನೆ ಹಸ್ತಲಾಘವ ಮಾಡುವ ಪಾಶ್ಚಿಮಾತ್ಯ ಸಂಸ್ಕೃತಿ ಇದೀಗ ವಿಶ್ವದ ಎಲ್ಲೆಡೆಯೂ ವ್ಯಾಪಿಸಿದೆ. ಆದರೆ ಇತ್ತೀಚಿನ ಸಂಶೋಧನೆಯೊಂದು ಹಸ್ತಲಾಘವದ ದುಷ್ಪರಿಣಾಮವನ್ನು ಬಯಲು ಮಾಡಿದ ಮೇಲೆ ನಾವು ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂಬ ನಿರ್ಧಾರಕ್ಕೆ ಬಂದರೆ ಅಚ್ಚರಿಯೇನಿಲ್ಲ. ಆ ಸಂಶೋಧನೆಯ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಮಾಡುವ ಧೂಮಪಾನದಷ್ಟೇ ಅಪಾಯಕಾರಿ ಈ ಹಸ್ತಲಾಘವ!

ಅಂದರೆ ಸಾರ್ವಜನಿಕ ಸ್ಥಳಗಳಲ್ಲಿ ಯಾರೋ ಧೂಮಪಾನ ಮಾಡುತ್ತಿದ್ದರೆ ಅಕ್ಕಪಕ್ಕದವರು ಹೇಗೆ ನಿಷ್ಕಾರಣವಾಗಿ ರೋಗಕ್ಕೆ ತುತ್ತಾಗುತ್ತಾರೆಯೋ ಹಾಗೆಯೇ ಸೋಂಕು ರೋಗವುಳ್ಳ ಒಬ್ಬ ವ್ಯಕ್ತಿ ಮತ್ತೊಬ್ಬನಿಗೆ ಹಸ್ತಲಾಘವ ಮಾಡುವುದರಿಂದ ಆ ವ್ಯಕ್ತಿಯೂ ಸೋಂಕು ರೋಗಕ್ಕೆ ತುತ್ತಾಗಬೇಕಾಗುತ್ತದೆ. ಅದರಲ್ಲೂ ಆಸ್ಪತ್ರೆಗಳಲ್ಲಿ ವೈದ್ಯರಿಗೆ ಹಸ್ತಲಾಘವ ಮಾಡುವುದರಿಂದ ಅಪಾಯಕಾರಿ ಸಮಸ್ಯೆಗಳನ್ನು ಬರ ಮಾಡಿಕೊಳ್ಳುವ ಅಪಾಯವಿದೆ ಎಂದು ಸಂಶೋಧನೆ ಹೇಳಿದೆ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಈಜು ಬಂದರೆ ಸಾಲದು!



ಯಾವುದೇ ಪ್ರತಿಭೆಯಿರಲಿ, ವ್ಯಕ್ತಿಯಲ್ಲಿ ಎಷ್ಟೇ ಅದ್ಭುತವಾಗಿ ಅದು ಅಡಗಿರಲಿ, ಆದರೆ ದಿನವೂ ಖಡ್ಗವನ್ನು ಸಾಣೆ ಹಾಕಿ ಹರಿತವಾಗಿ ಮಾಡಿದಂತೆ ಆ ಪ್ರತಿಭೆಯನ್ನು ತೀಕ್ಷ್ಣಗೊಳಿಸಬೇಕಾಗುತ್ತದೆ. ಒಂದು ದಿನ ಮರೆತರೂ ಅದಕ್ಕೆ ತುಕ್ಕು ಹಿಡಿಯಲು ಶುರುವಾಗುತ್ತದೆ!

ಜೋಷ್ ಮಾತು
• ವಿಕ್ರಮ್ ಜೋಶಿ

'ಈಜು ಬಾರದ ಪಂಡಿತ' ಅಂತ ಒಂದು ಪ್ರಸಿದ್ಧವಾದ ಗಾದೆ ಮಾತಿದೆ. ಇದರ ಅರ್ಥ ನಮಗೆಲ್ಲ ಗೊತ್ತು. ಹಾಗಿದ್ದರೆ ಈಜಲು ಬಂದರೆ ಸಾಕೆ? 'ಹೌದು' ಎಂದು ತಕ್ಷಣಕ್ಕೆ ಉತ್ತರಿಸಬಹುದು. ಆದರೆ ಇವತ್ತಿನ ಜಗತ್ತಿನಲ್ಲಿ, ಈಜು ಕೊಳದಲ್ಲಿ ಈಜಲು ಕಲಿತವನಿಗಿಂತ ಈಜಿನ ಹತ್ತು ಆಯಾಮಗಳ ಕುರಿತು ಆಳವಾಗಿ ಓದಿಕೊಂಡ ಪಂಡಿತನಿಗೆ ಹೆಚ್ಚು ಬೆಲೆ. ಈಜು ಬರುತ್ತದೆ ಎನ್ನುವವರು ವೇಗವಾಗಿ, ನೇರವಾಗಿ, ತಿರುಗಿ, ಮಲಗಿ, ನೀರಿನ ಮೇಲೆ, ನೀರಿನ ಆಳಕ್ಕೆ, ಹೀಗೆ ಈಜಿನ ಹಲವಾರು ಬಗೆಯನ್ನು ಕಲಿತು ಪ್ರಾವೀಣ್ಯತೆ ಪಡೆದರೆ ಮಾತ್ರ ಏನೋ ಸಾಧಿಸಿದಂತೆ.

ಮೈಕಲ್ ಪೆಲ್ಪ್ಸ್ ಎನ್ನುವಾತ ಒಲಂಪಿಕ್ಸ್‌ನ ಈಜುವ ಸ್ಪರ್ಧೆಯಲ್ಲಿ ಎಷ್ಟು ಚಿನ್ನದ ಪದಕಗಳನ್ನು ಗೆದ್ದಿದ್ದಾನೆ ಎನ್ನುವುದು ನೆನಪಿದೆಯೇ? ಎಂಟು! ಆತ ಕೇವಲ ಈಜನ್ನು ಕಲಿತು ಸುಮ್ಮನಾಗಿದ್ದಿದ್ದರೆ? ಅಥವಾ ಅವನ ದೇಹ ರಚನೆಯು ಈಜಿಗೆ ಅನುಕೂಲಕರವಾಗಿದೆ ಎಂದು ಅಭ್ಯಾಸ ನಡೆಸದೇ ಹೋಗಿದ್ದರೆ? ಅಥವಾ ಒಂದು ಚಿನ್ನದ ಪದಕ ಸಿಕ್ಕಿತು, ಇನ್ನು ಸಾಕು ಎಂದು ಒಲಂಪಿಕ್ಸ್ ಪಂದ್ಯಾವಳಿಯಲ್ಲಿ ಅತ್ತಿತ್ತ ಅಡ್ಡಾಡುತ್ತಾ ಕುಳಿತಿದ್ದರೆ ಇಂದು ಆತನ ಹೆಸರಿನಲ್ಲಿ ಇತಿಹಾಸವು ರಚನೆ ಆಗುತ್ತಿರಲಿಲ್ಲ. ಆತನ ಪ್ರಯತ್ನ, ಕಲಿಕೆ, ಕೌಶಲ್ಯದ ಬೆಳವಣಿಗೆ ನಿರಂತರವಾಗಿತ್ತು!

ಕ್ಷೇತ್ರಕ್ಕೆ ಅತ್ಯಗತ್ಯವಾದ ಜ್ಞಾನ

ಈಜಿನ ವಿಷಯಕ್ಕೆ ಬಂದಾಗ, ಬಾವಿಯಲ್ಲೋ, ಕೊಳದಲ್ಲೋ, ಕೆರೆಯಲ್ಲೋ, ನದಿಯಲ್ಲೋ ಅಥವಾ ಸಮುದ್ರದಲ್ಲೋ? ಎಲ್ಲಿ ಈಸಿ ಜಯಿಸಬೇಕು ಎನ್ನುವ ಸ್ಪಷ್ಟತೆ ಇರಬೇಕು. ನಮಗೆ ಬೇಕಾದ ಹೆಗ್ಗಳಿಕೆಯ ಗರಿಯ ಮೇಲೆ ಗುರಿಯು ಬದಲಾಗುತ್ತಾ ಹೋಗುತ್ತದೆ. ಸಮುದ್ರದಲ್ಲಿ ಈಸಬೇಕು ಅಂದರೆ ಅದಕ್ಕೆ ಬೇರೆಯೇ ಕೌಶಲ್ಯ ಬೇಕು, ಹೆಚ್ಚು ಆಳವಿಲ್ಲದ ಕೆರೆಯಲ್ಲಿ ಈಜುವುದು ಮಕ್ಕಳಿಗೂ ಬರುತ್ತದೆ. 'ಈಜಿ ಏನಾಗಬೇಕು?' ಎನ್ನುವುದರ ಮೇಲೆ ನಮ್ಮ ಕೌಶಲ್ಯ, ಪ್ರಯತ್ನ ಎಲ್ಲವೂ ನಿರ್ಧಾರವಾಗುತ್ತದೆ. ಬರೀ ನೀರಿನ ಮೇಲೆ ತೇಲಲು ಬಂದರೆ ಮುಂದೆ ಹೋಗುವುದಿಲ್ಲ. ಸ್ವಲ್ಪ ದೂರ ಈಸಿ ಸುಸ್ತಾದರೆ ಹಳ್ಳದ ಒಂದು ದಡದಿಂದ ಇನ್ನೊಂದು ದಡವನ್ನು ತಲುಪಲು ಸಾಧ್ಯವಿಲ್ಲ. ಮೀನಿನಂತೆ ನಿರಾಳವಾಗಿ, ಚುರುಕಾಗಿ ಈಜಲು ಬಂದರೂ ತೆರೆಯ ಮನಸ್ಥಿತಿಯನ್ನು ಅರಿಯದೇ ಸಮುದ್ರದಲ್ಲಿ ಈಜಿ ಅಲ್ಲಿನ ದ್ವೀಪವನ್ನು ಮುಟ್ಟುವುದು ಸಾಧ್ಯವಿಲ್ಲ. ಹೀಗಾಗಿ ಕ್ಷೇತ್ರಕ್ಕೆ ತಕ್ಕ ಜ್ಞಾನ ನಮ್ಮಲ್ಲಿರಬೇಕು.

ಪ್ರತಿಭೆಗೆ ಸಾಣೆ ಹಿಡಿವ ಕಾರ್ಯ

ಈಜುವಿಕೆಯನ್ನು ಇಲ್ಲಿ ಯಾಕೆ ಉದಾಹರಣೆಯಾಗಿ ತೆಗೆದುಕೊಂಡು ಚರ್ಚಿಸುವ ಪ್ರಸಂಗ ಬಂದಿತು ಅಂದರೆ ನಮ್ಮಲ್ಲಿ ಒಂದು ಪದವಿ ಪಡೆದ ನಂತರ, ಕೆಲಸವು ಸಿಕ್ಕ ನಂತರ ಅಥವಾ ವ್ಯಾಪಾರ ಶುರುಮಾಡಿದ ನಂತರ 'ಅಲ್ಲಿಗೇ ನಮ್ಮ ಪ್ರಯತ್ನ ಮುಗಿಯಿತು' ಎಂದು ತಿಳಿಯುವ ಬಹಳಷ್ಟು ಜನರಿದ್ದಾರೆ. ಒಂದು ಮೈಲಿಗಲ್ಲು ಮುಟ್ಟಿದ ನಂತರದಲ್ಲಿ ಅವರು ತಮ್ಮ ಕಲಿಕೆಯನ್ನು, ಅಭಿವೃದ್ಧಿ ಹೊಂದಲು ಮಾಡಬೇಕಾದ ಪ್ರಯತ್ನವನ್ನು ಮಾಡುವುದೇ ಇಲ್ಲ. 'ಮೇಡ್ ಇನ್ ಜಪಾನ್' ಎನ್ನುವುದು ಸೋನಿ ಕಂಪನಿಯ ಯಶಸ್ಸಿನ ಕುರಿತಾಗಿ ಬರೆದ ಪುಸ್ತಕ. ಅದರಲ್ಲಿ ಲೇಖಕರು - ಕಂಪನಿಯೊಳಗೆ ಪ್ರವೇಶ ಪಡೆಯಲು ಮಾತ್ರವೇ ಕಾಲೇಜಿನಲ್ಲಿ ಪಡೆದ ಅಂಕಗಳು ಸಹಾಯಕ್ಕೆ ಬರುತ್ತವೆ, ನಂತರ ಒಮ್ಮೆ ಕಂಪನಿಯಲ್ಲಿ ಸೇರಿದ ಮೇಲೆ ಅಲ್ಲಿ ಕೆಲಸ ಮಾಡುವವರೆಲ್ಲರೂ ಒಂದೇ. 'ಕಾಲೇಜಿನಲ್ಲಿ ಎಷ್ಟು ಅಂಕ ಪಡೆದಿದ್ದರು' ಎನ್ನುವುದರ ಮೇಲೆ ತಾರತಮ್ಯ ಆಗುವುದಿಲ್ಲ.

ಕೆಲಸದಲ್ಲಿ ಮುಂದೆ ಬರಲು ಮತ್ತೆ ಮೊದಲಿನಷ್ಟೇ ಪರಿಶ್ರಮ ಪಡಬೇಕು, ಹಗಲು ರಾತ್ರಿಗಳನ್ನು ಒಂದು ಮಾಡಿ ಹೊಸ ಹೊಸ ಕೌಶಲ್ಯಗಳನ್ನು ಕಲಿಯಬೇಕು - ಎನ್ನುವ ಮಾತನ್ನು ಹೇಳುತ್ತಾರೆ. ಇದು ಎಷ್ಟೋ ಜನರಿಗೆ ಅರ್ಥವಾಗುವುದಿಲ್ಲ. ಒಮ್ಮೆ ಕಂಪನಿಯೊಳಗೆ ಒಳ್ಳೆಯ ಆದಾಯದ ಕೆಲಸ ಸಿಕ್ಕಿತು ಅಂದಕೂಡಲೇ ಸಾಧನೆಯ ಅಮಲೇರಿ ಒಂದು ರೀತಿಯ ಅಲಕ್ಷ್ಯ ಭಾವ ಮೋಡದಂತೆ ಅವರನ್ನು ಕಟ್ಟಿ ಬಿಡುತ್ತದೆ. ಇದೇ ಮನಸ್ಥಿತಿಯು ಕೆಲವು ಅತ್ಯುತ್ತಮ ಕಲಾವಿದರನ್ನು ಹಾದಿತಪ್ಪಿಸುವುದು. ತಮ್ಮ ಒಂದು ಚಲನಚಿತ್ರ, ಧಾರವಾಹಿ, ಹಾಡು ಅಥವಾ ಪುಸ್ತಕಗಳು ಪ್ರಸಿದ್ಧಿ ಪಡೆಯಿತೋ ಮುಂದೆ ತಮ್ಮನ್ನು ಇನ್ನೂ ನಿರಂತರವಾಗಿ ಅಭಿವೃದ್ಧಿ ಪಡಿಸಿಕೊಳ್ಳದೆ ವ್ಯಸನಗಳ ಬಾಯಿಗೆ ತುತ್ತಾಗುತ್ತಾರೆ. ಯಾವುದೇ ಪ್ರತಿಭೆಯಿರಲಿ, ಎಷ್ಟೇ ಅದ್ಭುತವಾಗಿ ಅವರಲ್ಲಿ ಅಡಗಿರಲಿ ಆದರೆ ಅದನ್ನು ದಿನವೂ ಖಡ್ಗವನ್ನು ಸಾಣೆ ಹಾಕಿ ಹರಿತವಾಗಿ ಮಾಡಿದಂತೆ ನಮ್ಮಲ್ಲಿ ಇರುವ ಪ್ರತಿಭೆಯನ್ನು ತೀಕ್ಷ್ಣಗೊಳಿಸಬೇಕಾಗುತ್ತದೆ. ಒಂದು ದಿನ ಮರೆತರೂ ಅದಕ್ಕೆ ತುಕ್ಕು ಹಿಡಿಯಲು ಶುರುವಾಗುತ್ತದೆ!

ಸಂಬಂಧಗಳಲ್ಲಿ ನಿರ್ಲಕ್ಷ್ಯ ಸಲ್ಲದು

ಸಂಬಂಧಗಳೂ ಹಾಗೆಯೇ. ಒಮ್ಮೆ ಸಂಬಂಧಗಳು ಕೂಡಿದ ಮೇಲೆ, 'ಇದನ್ನು ಉಳಿಸಿಕೊಳ್ಳಲು ಏನೂ ಮಾಡಬೇಕಿಲ್ಲ' ಎಂಬುದನ್ನು ಊಹಿಸಿಕೊಂಡು ನಿರ್ಲಕ್ಷ್ಯ ಮಾಡಿದರೆ ಆ ಸಂಬಂಧಗಳು ಹೆಚ್ಚು ದಿನ ನಿಲ್ಲಲಾರವು. ದಿನವೂ ಆ

ಸಂಬಂಧಕ್ಕೆ ಒಂದು ಹೊಸ ಅರ್ಥ ಸಿಗುವಂತಿರಬೇಕು. ಹೆಜ್ಜೆ ಹೆಜ್ಜೆಗೂ ಸ್ವಾರಸ್ಯ ಹುಟ್ಟುತ್ತಿರಬೇಕು. ಅದರ ಜವಾಬ್ದಾರಿ ನಮ್ಮ ಕೈಯಲ್ಲಿ ಇರುತ್ತದೆ. ಎಷ್ಟೋ ಸಲ ಮದುವೆ ಆದ ಕೆಲವು ತಿಂಗಳುಗಳು ಒಬ್ಬರಿಗೊಬ್ಬರು ಅತಿಯಾದ ಕಾಳಜಿ ಮಾಡುತ್ತಾರೆ ಆದರೆ ಕಾಲಕ್ರಮೇಣ ಅವರಿಗೆ ಸಂಸಾರದ ಸರಸ ವಿರಸದಲ್ಲಿ ಹೊಸತನವೇ ಕಾಣುವುದಿಲ್ಲ. 'ಮದುವೆ ಆಗಿ ಆಯಿತು, ಇನ್ನೇನು?' ಎನ್ನುವ 'ಟೇಕ್ ಇಟ್ ಗ್ರಾಂಟೆಡ್' ಮನೋಭಾವ ಬೆಳೆಯುತ್ತಾ ಹೋಗುತ್ತದೆ.

ಅದೇ ತರಹ ಪಾಲಕರು ಹಾಗೂ ಮಕ್ಕಳ ಸಂಬಂಧವೂ. ಮಕ್ಕಳು ಪಾಲಕರ ಜೊತೆ ನಡೆದುಕೊಳ್ಳುವ ರೀತಿ ಹಾಗೆಯೇ ಪಾಲಕರು ಮಕ್ಕಳ ಜೊತೆ ವ್ಯವಹರಿಸುವ ನೀತಿಯಲ್ಲಿ ಇಷ್ಟೇ ಎನ್ನುವ ಮಿತಿ ಇರಬಾರದು. ಪ್ರತಿ ದಿನವೂ ಹೊಸತು. ವಯಸ್ಸಿನ ಒಂದು ಗಡಿ ದಾಟುತ್ತಿದ್ದಂತೆ ಅಲ್ಲಿಯ ಬೇಕು ಬೇಡಗಳು ಬದಲಾಗುತ್ತಾ ಹೋಗುತ್ತದೆ. 'ಮಕ್ಕಳನ್ನು ಹೆತ್ತಿದ್ದಾಯಿತು, ಇನ್ನು ಮುಗಿಯಿತು' ಎಂದು ತಾಯಿ ಸುಮ್ಮನಾದರೆ? 'ಪಾಲಕರಿಗೆ ಹಣ ಕಳಿಸುತ್ತಿದ್ದೇನೆ' ಎಂದು ಮಕ್ಕಳು ಅವರನ್ನು ಆಗಾಗ ಭೇಟಿ ಕೊಡದೆ ದೂರವಾದರೆ? ನೌಕರಿ ಎನ್ನುವುದು ಅರವತ್ತರ ತನಕ ಆದರೆ ಸಂಬಂಧ ಎನ್ನುವುದು ಕೊನೆಯ ಉಸಿರು ಇರುವ ತನಕ.

ಹೀಗಾಗಿ ಈಜಿನಲ್ಲಿ ಹೊಸ ಹೊಸ ತಂತ್ರಗಾರಿಕೆಯನ್ನು ಕಲಿತು ನಿಪುಣರಾದಂತೆ, ಕೆಲಸದಲ್ಲಿ ಸತತ ಪರಿಶ್ರಮ ಪಟ್ಟು ಮೇಲಿನ ಹುದ್ದೆಗೆ ಹೋದಂತೆ, ವ್ಯಾಪಾರದಲ್ಲಿ ನವ ನವೀನ ಪ್ರಯೋಗಗಳನ್ನು ಮಾಡಿ ಹೆಚ್ಚುಗಳಿಕೆ ಮಾಡಿದಂತೆ, ಸಂಬಂಧಗಳ ವಿಷಯದಲ್ಲಿ ಕೂಡ ಹಾಗೆಯೇ ಪ್ರತಿ ದಿನವೂ ಅಷ್ಟೇ ಪರಿಶ್ರಮ ಪಟ್ಟು ಅದರಲ್ಲಿ ಒಳ್ಳೆಯತನವನ್ನು ಕಾಪಾಡಿಕೊಳ್ಳಬೇಕು!

ಹವ್ಯಾಸದಿಂದ ಬದಲಾದೀತು ಹಣೆಬರಹ

• ವಾಗೀಶ್ ಕಟ್ಟಿ, ಗೌರಿಬಿದನೂರು

ಹವ್ಯಾಸವೆಂದರೆ ಬೇರೆಯವರನ್ನು ನೋಡಿ ಅನುಕರಿಸುವುದಲ್ಲ. ನಮಗೆ ಯಾವ ವಿಷಯದಲ್ಲಿ ಹೆಚ್ಚಿನ ಆಸಕ್ತಿಯಿದೆ, ಏನು ಮಾಡಿದರೆ ನಮಗೆ ಸಂತೋಷವಾಗುತ್ತದೆ ಎಂದು ಮೊದಲು ಕಂಡುಕೊಳ್ಳಬೇಕಾಗುತ್ತದೆ.

ಯಾವುದೋ ರಿಯಾಲಿಟಿ ಶೋ ನೋಡಿ ನಾನೂ ಟಿವಿಯಲ್ಲಿ ಕಾಣಿಸಿಕೊಳ್ಳಬೇಕು, ಇನ್ಯಾರೋ ಯೂಟ್ಯೂಬರ್ ಆಗಿ ಫೇಮಸ್ ಆದರು, ನಾನೂ ಯೂಟ್ಯೂಬರ್ ಆಗಬೇಕು ಎಂದೆಲ್ಲ ಬೇರೆಯವರನ್ನು ನೋಡುತ್ತಾ ನಮ್ಮ ಹವ್ಯಾಸ ಬೆಳೆಸಿಕೊಳ್ಳುವುದಲ್ಲ. ಇತರರ ಕೆಲಸಗಳು ನಮಗೆ ಕೇವಲ ಸ್ಫೂರ್ತಿಯಾಗ ಬೇಕಷ್ಟೆ.

ಇಷ್ಟವಾಗುವಂತಹ ಹವ್ಯಾಸಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ, ಅದು ಸಂಪೂರ್ಣ ಆತ್ಮತೃಪ್ತಿಯನ್ನು ನೀಡುತ್ತದೆ. ಆಗ ಅದರಲ್ಲೇ ನಾವು ಸಂತೋಷವನ್ನು ಕಾಣುತ್ತೇವೆ. ಮತ್ತೆ ಮತ್ತೆ ಅದೇ ಕೆಲಸ ಮಾಡಲು ಮನಸ್ಸು ಪ್ರಚೋದಿಸುತ್ತದೆ. ಹಾಗಾಗಿ ಆ ಕೆಲಸಗಳಲ್ಲಿ ನಿಪುಣರಾಗುತ್ತಿರುತ್ತೇವೆ. ಅದೇ ಹವ್ಯಾಸ ಮುಂದೊಂದು ದಿನ, ಲೈಫ್ ಅಲ್ಲಿ ಪ್ರೊಡಕ್ಟಿವ್ ಆಗಿ, ಪ್ರವೃತ್ತಿಯಾಗಿ ಬೆಳೆದು ಹೆಮ್ಮರವಾಗಿ ಹೆಸರು, ಖ್ಯಾತಿ ತಂದುಕೊಡಬಹುದು. ಹವ್ಯಾಸಗಳನ್ನೇ ಕೆಲವರು ವೃತ್ತಿಯಾಗಿ ಆಯ್ದುಕೊಳ್ಳಬಹುದು. ಇನ್ನು ಕೆಲವರಿಗೆ ಇದೇ ಪ್ರವೃತ್ತಿಯಾಗಬಹುದು. ಇವತ್ತು ವಿದ್ಯಾಭ್ಯಾಸ ಕೇವಲ ಅಂಕಗಳನ್ನು ಪಡೆಯುವುದಕ್ಕಾಗಿಯೇ ಮೀಸಲಾಗಿದೆ. ಇಂಥ ಪರಿಸ್ಥಿತಿಯಲ್ಲಿ ಉದ್ಯೋಗದ ಅವಕಾಶಗಳು ಸರಿಯಾಗಿ ಸಿಗುತ್ತಿಲ್ಲ. ಹಾಗಾಗಿ ವಿದ್ಯಾಭ್ಯಾಸದ ಜತೆಗೆ ಹವ್ಯಾಸದ ರೂಪದಲ್ಲಿ ಯಾವುದಾದರೊಂದು ಕಲೆಯನ್ನೋ, ಕೌಶಲ್ಯವನ್ನೋ ಕಲಿತರೆ, ಮುಂದೆ ಕೆಲಸ ಸಿಗದಿದ್ದರೂ ಅಥವಾ ಜೀವನದ ಇನ್ಯಾವುದೋ ಪರಿಸ್ಥಿತಿಗಳಲ್ಲಿಯೂ ಈ ಹವ್ಯಾಸವನ್ನೇ ವೃತ್ತಿಯನ್ನಾಗಿಸಿಕೊಳ್ಳಲೂ ಬಹುದು.

ಹವ್ಯಾಸ ನಮ್ಮ ಜತೆಯಲ್ಲಿಯೇ ಬಂದು, ನಮ್ಮೊಂದಿಗೇ ಬೆಳೆಯುತ್ತ, ನಮ್ಮೊಂದಿಗೇ ಜೀವಿಸಿ, ನಮ್ಮಲ್ಲಿಯೇ ಅಂತರ್ಗತವಾಗುವ ಅಪೂರ್ವ ಕಲೆ. ಉತ್ತಮ ಹವ್ಯಾಸದಿಂದಾಗಿ ಶಕ್ತಿಶಾಲಿ ವ್ಯಕ್ತಿತ್ವ ನಿರ್ಮಾಣವಾಗಿ, ಜೀವನದ ಯಾವುದಾದರೂ ಸಂದರ್ಭದಲ್ಲಿ ಸಹಾಯಕ್ಕೆ ಬರುತ್ತದೆ. ಶಾಂತಿ, ನೆಮ್ಮದಿ, ಸಂತೋಷ, ಏಕಾಗ್ರತೆ, ಶಿಸ್ತು, ಸಂಯಮ, ಸಕಾರಾತ್ಮಕ ಭಾವನೆಗಳಿಂದ ಮನಸ್ಸಿಗೆ ಸಂಜೀವಿನಿಯಾಗಿ ಕೆಲಸ ಮಾಡುವ ಹವ್ಯಾಸವನ್ನು ಹಣದಿಂದ ಕೊಂಡುಕೊಳ್ಳಲು ಸಾಧ್ಯವೇ? ಹವ್ಯಾಸ ಜ್ಞಾನದ ಅಭಿವೃದ್ಧಿಗೆ ಪೂರಕವಾಗಿ, ಮನಸ್ಸಿನಲ್ಲಿಯೇ ಹಾಗೇ ಸುಮ್ಮನೆ ಕಂಡು ಕೊಳ್ಳುವ ಆತ್ಮತೃಪ್ತಿ. ಇದು ಜೀವನಪೂರ್ತಿ ಕಲಿಯುವಂತೆ ಮಾಡಿ, ನಮ್ಮನ್ನು ಬೆಳೆಸುತ್ತ, ಸಫಲತೆಯತ್ತ ಕೊಂಡೊಯ್ಯುತ್ತದೆ. ಹವ್ಯಾಸಗಳಿದ್ದಲ್ಲಿ ಬದುಕಿಗೊಂದು ಅರ್ಥ, ಗುರಿ ಸಿಗುತ್ತದೆ. ಪ್ರತಿಯೊಬ್ಬರಿಗೂ ಚಿಕ್ಕದಿರಲಿ, ದೊಡ್ಡದಿರಲಿ ಒಂದು ಹವ್ಯಾಸ ಬೇಕೇ ಬೇಕು. ಹವ್ಯಾಸಗಳಿಂದ ಏನನ್ನೂ ಅಪೇಕ್ಷಿಸದೆ ಕೇವಲ ಆತ್ಮತೃಪ್ತಿಗಾಗಿ ಮಾಡುವಂತಹ ಆ ಒಂದು ಕೆಲಸವೇ ನಮ್ಮ ಹವ್ಯಾಸವಾಗಿರಬೇಕು. ನೀವು ಇಲ್ಲಿಯವರೆಗೆ ಯಾವುದೇ ಹವ್ಯಾಸವನ್ನು ಬೆಳೆಸಿಕೊಂಡಿಲ್ಲವೆಂದರೆ, ಒಂದೇ ಒಂದು ಹವ್ಯಾಸವನ್ನಾದರೂ ಬೆಳೆಸಿಕೊಂಡು ನೋಡಿ, ನಿಮ್ಮ ಜೀವನದ ಶೈಲಿಯೇ ಬದಲಾಗಿ ಬಿಡುತ್ತದೆ.

ಜೀವನದ ಉಸಿರು

ಚೇತನ್ ಭಗತ್, ಮೋಟಿವೇಷನಲ್ ಸ್ಪೀಕರ್ ಹಾಗೂ ಲೇಖಕರಾಗಿ ಹೆಸರು ವಾಸಿಯಾಗಿದ್ದಾರೆ. ಅವರು ಐಐಎಂನಲ್ಲಿ ವಿದ್ಯಾಭ್ಯಾಸ ಮುಗಿಸಿದ ಕೂಡಲೇ ಮನಸ್ಸು ಮಾಡಿದ್ದರೆ, ಭಾರತದ ಒಬ್ಬ ದೊಡ್ಡ ಬಿಸಿನೆಸ್ ಮ್ಯಾನ್ ಆಗಬಹುದಾಗಿತ್ತು. ಆದರೆ ತಮ್ಮ ಕತೆ ಬರೆಯುವ ಹವ್ಯಾಸವನ್ನೇ ವೃತ್ತಿಯನ್ನಾಗಿಸಿಕೊಂಡು ಬಹು ದೊಡ್ಡ ಲೇಖಕರಾಗಿ ವಿಶ್ವ ಪ್ರಸಿದ್ಧರಾಗಿದ್ದಾರೆ. ಅದೆಷ್ಟೋ ಸಂಗೀತ, ಚಿತ್ರ ಕಲಾವಿದರು, ಕವಿ, ಸಾಹಿತಿಗಳು, ನಾಟಕಕಾರರೆಲ್ಲರೂ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿದುಕೊಂಡಿದ್ದಾರೆ. ರನ್ನ, ಪಂಪ, ಕುಮಾರವ್ಯಾಸ, ಕಾಳಿದಾಸ, ಪುರಂದರ ದಾಸ, ತೆನಾಲಿ ರಾಮಕೃಷ್ಣ, ಬೀರಬಲ್, ರವಿವರ್ಮ ಮುಂತಾದವರು ಹವ್ಯಾಸವನ್ನೇ ಜೀವನದ ಉಸಿರಾಗಿಸಿಕೊಂಡಿದ್ದವರು.

ಬೊಜ್ಜು ನಿವಾರಿಸಲು ಸಜ್ಜಾಗಿ

• ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ಇಂದು ಶೇ.60ರಷ್ಟು ಜನರಲ್ಲಿ ಸರ್ವೇಸಾಮಾನ್ಯ ಕಾಣುವ ಕಾಯಿಲೆ ಬೊಜ್ಜು. ಸಿಕ್ಕಿದ್ದನ್ನೆಲ್ಲ ತಿನ್ನುವ ಹೊಟ್ಟೆಬಾಕ ಪ್ರವೃತ್ತಿ, ಅತಿಯಾದ ಸಿಹಿತಿಂಡಿ, ಐಸ್ ಕ್ರೀಂ ಸೇವನೆ, ಹೆಚ್ಚಿನ ಚಟುವಟಿಕೆ ಇಲ್ಲದೇ ಕುಳಿತೇ ಇರುವಿಕೆ, ವಾಕಿಂಗ್, ಯೋಗ-ವ್ಯಾಯಾಮ ಮಾಡದಿರುವಿಕೆ ಎಲ್ಲವೂ ಒಗ್ಗೂಡಿ ಹೊಟ್ಟೆ, ಸೊಂಟದ ಸುತ್ತಲೂ ಟೈರ್ ಮಾದರಿಯಲ್ಲಿ ಬೊಜ್ಜು ಸಂಗ್ರಹಕ್ಕೆ ದಾರಿಯಾಗುತ್ತದೆ. ಸುಲಭವಾಗಿ ಬೊಜ್ಜು ಶೇಖರಣೆಯಾಗುತ್ತದೆ. ಆದರೆ ಬೇಗ ಹೋಗುವುದಿಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಸುತ್ತ ಸಿಗುವ ಪದಾರ್ಥಗಳ ಸೇವನೆಯಿಂದಲೇ ಈ ಬೊಜ್ಜನ್ನು ನಿವಾರಿಸಿಕೊಳ್ಳಬಹುದು.

- ತೊಂಡೆಕಾಯಿಯ ರಸ, ಪಲ್ಯ, ಸಾಂಬಾರ್, ಅಥವಾ ಹಸಿಯಾಗಿಯೇ ಅಗಿದು ತಿನ್ನುವುದರಿಂದ ಬೊಜ್ಜು ಕ್ರಮೇಣ ಕಡಿಮೆಯಾಗುತ್ತದೆ. ಆದರೆ ನೆನಪಿಡಿ, ಅತಿಯಾದ ಸೇವನೆ ಅಪಾಯಕಾರಿ.
- ತುರಿದ ನವಿಲುಕೋಸು, ಈರುಳ್ಳಿ, ಟೊಮ್ಯಾಟೊ, ಕಾಯಿತುರಿ, ಸ್ವಲ್ಪ ಕಾಳುಮೆಣಸಿನ ಪುಡಿ ಸೇರಿಸಿ ಅದಕ್ಕೆ ಎರಡು ಚಮಚ ಆಲಿವ್ ಆಯಿಲನ್ನು ಬೆರೆಸಿ ಸಲಾಡ್ ತಯಾರಿಸಿ ಊಟಕ್ಕೆ ಮುನ್ನ ತೆಗೆದುಕೊಳ್ಳಬೇಕು.
- ಅಲಸಂದೆ ಕಾಳು ಹಲವು ವಿಟಮಿನ್‌ಗಳು, ಕಬ್ಬಿಣ, ಪೊಟಾಷಿಯಂ, ಕ್ಯಾಲ್ಸಿಯಂ, ಫೋಲಿಕ್ ಆಸಿಡ್, ಮೆಗ್ನೀಸಿಯಂ, ಸೆಲೆನಿಯಮ್, ಸೋಡಿಯಂ, ಝಿಂಕ್, ತಾಮ್ರ ಇತ್ಯಾದಿ ಅಸಂಖ್ಯ ಪೋಷಕಾಂಶಗಳನ್ನು ಹೊಂದಿದ್ದು ಇದರ ಸೇವನೆಯಿಂದ ದೇಹದಲ್ಲಿನ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ.
- ನಮ್ಮ ದಿನನಿತ್ಯದ ಆಹಾರದಲ್ಲಿ ಕಳಲೆಯನ್ನು ಹೆಚ್ಚು ಉಪಯೋಗಿಸಬೇಕು. ಇದರಲ್ಲಿರುವ ಫೈಟೋಸ್ಟೆರಾಲ್ ಹಾಗೂ ಫೈಟೋನ್ಯೂಟ್ರಿಯಂಟ್ಸ್ ನಮ್ಮ ದೇಹದಲ್ಲಿನ ಎಲ್.ಡಿ.ಎಲ್.ಎಂಬ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆ ಮಾಡಿ, ಆ ಮೂಲಕ ಬೊಜ್ಜನ್ನು ನಿವಾರಿಸುತ್ತದೆ. ಕಳಲೆಯ ಕಷಾಯ, ಸಾಂಬಾರ್, ಪಲ್ಯ ಸೇವನೆ ಉಪಯುಕ್ತ.
- ಬ್ರೋಕೋಲಿ ಬೊಜ್ಜು ನಿವಾರಣೆಗೆ ಪರಿಣಾಮಕಾರಿ. ಈರುಳ್ಳಿ, ಬೆಳ್ಳುಳ್ಳಿ, ಬ್ರೋಕೋಲಿ, ಟೊಮ್ಯಾಟೊ, ಹಾಗೂ ಕೆಲ ಮೊಳಕೆ ಕಾಳುಗಳನ್ನು ಬೇರೆ ಬೇರೆಯಾಗಿ ಸ್ವಲ್ಪ ಬೇಯಿಸಿ, ಎಲ್ಲವನ್ನೂ ಬೇಕಾದ ಪ್ರಮಾಣದಲ್ಲಿ ಬೆರೆಸಿ ಅದಕ್ಕೆ ಕಾಳುಮೆಣಸಿನ ಪುಡಿ, ನಿಂಬೆರಸ, ಒಂದು ಚಮಚ ಆಲಿವ್ ಎಣ್ಣೆ ಸೇರಿಸಿ ಸಾಲಡ್ ಮಾಡಿಕೊಂಡು ಸೇವಿಸಬೇಕು.

- ಲೆಮನ್ ಗ್ರೀನ್ ಟೀಗೆ ನಿಂಬೆರಸ ಬೆರೆಸಿ ಕುಡಿದರೆ ಗ್ರೀನ್ ಟೀಯಲ್ಲಿನ ಕೆಟಕಿನ್ ಎಂಬ ಆಂಟಿ ಆಕ್ಸಿಡೆಂಟ್ ದೇಹದ ಹೆಚ್ಚುವರಿ ಬೊಜ್ಜನ್ನು ಕರಗಿಸಿ ತೂಕ ಕಡಿಮೆ ಮಾಡುತ್ತದೆ.
- ರಾತ್ರಿ ಎರಡು ಅಂಜೂರ ಹಣ್ಣನ್ನು ನೀರಿನಲ್ಲಿ ನೆನೆಸಿಟ್ಟು, ಬೆಳಿಗ್ಗೆ ಅದನ್ನು ತೊಳೆದು ತಿಂದರೆ ಬೊಜ್ಜು ಕಡಿಮೆಯಾಗುತ್ತದೆ. ಆದರೆ ನೆನಪಿರಲಿ. ಅಂಜೂರವನ್ನು ಹಾಲಿನೊಂದಿಗೆ ನೆನೆಸಿ ತೆಗೆದುಕೊಂಡರೆ ಮತ್ತಷ್ಟು ತೂಕ ಹೆಚ್ಚಾಗುತ್ತದೆ.

ಉಳಿದಂತೆ ದೈನಂದಿನ ಬಿಡುವಿಲ್ಲದ ಚಟುವಟಿಕೆಗಳು, ಮಿತ ಆರೋಗ್ಯಕರ ಆಹಾರ ಸೇವನೆ, ಯೋಗ, ವ್ಯಾಯಾಮ, ವಾಕಿಂಗ್, ಸಿಹಿ ತಿಂಡಿ ವರ್ಜ್ಯನೆ ಬೊಜ್ಜು ಇಳಿಸಲು ಸಹಕಾರಿ.

ಸನ್ಮಾನ, ಪುರಸ್ಕಾರಕ್ಕೆ ಎಲ್ಲರೂ ಆಶಿಸುತ್ತೇವೆ. ಆದರೆ ಶ್ರಮ ಪಡಲು, ಸಣ್ಣದೊಂದು ರಿಸ್ಕ್ ತೆಗೆದುಕೊಳ್ಳಲೂ ಹಿಂದೇಟು ಹಾಕುತ್ತೇವೆ. ಆದರೆ, ಕೆಲವರು ಹಾಗಲ್ಲ, ಗಟ್ಟಿ ನೆಲೆ ಸಿಕ್ಕಿತು, ಇನ್ನೇನು ಇಲ್ಲೇ ಬೇರೂರಿದರು ಎನ್ನುವಾಗಲೇ ಹೊಸ ಸಾಧನೆಗೆ ಅಣಿಯಾಗಿ, ಜಗತ್ತೇ ನಿಬ್ಬೆರಗಾಗುವಂಥ ಸಾಧನೆ ಮಾಡುತ್ತಾರೆ. ಇಂದಿನ ಸಾಧಕರಾದ ತರುಣ್ ಮೆಹ್ತಾ ಮತ್ತು ಸ್ವಪ್ನಿಲ್ ಜೈನ್ ಅವರ ಕತೆಯೂ ಅಂತಹ ಸಾಲಿಗೆ ಖಂಡಿತ ಸೇರುತ್ತದೆ.

ಕನಸು ಕಾಣುವವರ ಮಾಡೆಲ್ ಮೆಹ್ತಾ-ಸ್ವಪ್ನಿಲ್

• ಕನಸು ಮೋಹನ

ಬಹುಶಃ ಈ ಎರಡೂ ಹೆಸರಿನ ಗುರುತು ಸಿಕ್ಕಿರಲಾರದು, ಇರಲಿ. ಈಗಂತೂ ರಸ್ತೆಯಲ್ಲಿ ಇವಿ (ಇಲೆಕ್ಟ್ರಿಕ್ ವೆಹಿಕಲ್)ಗಳ ಸೈಲೆಂಟಾಗಿ ಓಡುವುದನ್ನು ಗಮನಿಸಿರುತ್ತೀರಿ. ಅದರಲ್ಲಿ ಏಥರ್ ಸಂಸ್ಥೆಯ ಇವಿ ಸ್ಕೂಟರ್‌ಗಳನ್ನು ನೋಡಿ, ಮೆಚ್ಚಿಕೊಂಡಿರುತ್ತೀರಿ. ಇಂಥದ್ದೇ ಗಾಡಿ ಕೊಳ್ಳೋಣ ಎಂದು ಲೆಕ್ಕ ಹಾಕಿರುತ್ತೀರಿ. ಅಂಥ ಏಥರ್ ಸ್ಕೂಟರ್ ಸಂಸ್ಥೆಯ ಸ್ಥಾಪಕರೇ ಮೆಹ್ತಾ ಮತ್ತು ಜೈನ್.

ಐಐಟಿ ಮದ್ರಾಸ್‌ನಲ್ಲಿ ಓದಿದ ತರುಣ್ ಅಶೋಕ್ ಲೈಲಾಂಡ್‌ನಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಇದೇ ಕಾಲೇಜಿನಲ್ಲಿಯೇ ಸ್ವಪ್ನಿಲ್ ಕೂಡ ಓದಿದವರು. ಬಿಎಚ್‌ಇಎಲ್‌ನಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದರು. ಉನ್ನತ ಹುದ್ದೆ, ಕೈ ತುಂಬಾ ಸಂಬಳವಿದ್ದರೂ ತಾವೇನೋ ಮಿಸ್ ಮಾಡಿಕೊಳ್ಳುತ್ತಿದ್ದೇವೆ ಎಂಬ ಬೇಸರವಿತ್ತು. ಪ್ರಶಾಂತವಾದ ನದಿಯಲ್ಲಿ ಸುಮ್ಮನೇ ತೇಲುವುದಕ್ಕಿಂತ ಅಬ್ಬರದ ಸಮುದ್ರದ ರೋಮಾಂಚನಕ್ಕೆ ಇಬ್ಬರ ಮನಸ್ಸು ತುಡಿಯುತ್ತಿತ್ತು. ಹೀಗೊಂದು ದಿನ, ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಭೆಗೆ ಇಬ್ಬರೂ ಹೋಗಿದ್ದರು. ಹಿಂದೆ ತಮಗೆ ಪ್ರೊಫೆಸರ್ ಆಗಿದ್ದ ಕೃಷ್ಣಕುಮಾರ್ ಬಳಿ ತಮ್ಮ ಮನದಿಂಗಿತ ಮತ್ತು ತುಮುಲವನ್ನು ಹೇಳಿಕೊಂಡರು. ಅಂದಿನ ಭೇಟಿ ಮತ್ತು ಚರ್ಚೆಯೇ ಇಬ್ಬರ ಬದುಕಿಗೂ ದೊಡ್ಡ ತಿರುವಾಯಿತು. ರಿಸ್ಕ್ ತೆಗೆದುಕೊಳ್ಳದೇ ಇರುವುದೇ ದೊಡ್ಡ ರಿಸ್ಕ್, ನಿಮ್ಮ ಆತ್ಮಸಾಕ್ಷಿ ನಿಮ್ಮನ್ನು ಜೀವನ ಪರ್ಯಂತ ಕಾಡುತ್ತಿರುತ್ತದೆ. ಅದರ ಬದಲಾಗಿ, ಒಮ್ಮೆ ಧೈರ್ಯ ಮಾಡಿ ನಿಮ್ಮ ಅಂತಃಕರಣ ಹೇಳಿದಂತೆ ಕೇಳಿ. ಗೆದ್ದರೆ ಮಾದರಿ ಆಗುತ್ತೀರಿ, ಸೋತರೆ ಮಾನಸಿಕವಾಗಿ ಸಬಲರಾಗುತ್ತೀರಿ ಎಂಬ ಸ್ಫೂರ್ತಿಯನ್ನು ಪ್ರೊಫೆಸರ್ ತುಂಬುತ್ತಾರೆ. ಅಲ್ಲಿಂದ ಆರಂಭವಾಗಿದ್ದೇ ಮೆಹ್ತಾ ಮತ್ತು ಸ್ವಪ್ನಿಲ್ ಕನಸಿನ ಜರ್ನಿ.

ಏಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್

2013ರ ವೇಳೆಗೆ ನಮ್ಮ ಬೆಂಗಳೂರಿನಲ್ಲಿಯೇ ಏಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆ ಪ್ರಾರಂಭಿಸುತ್ತಾರೆ. ತಾವು ಓದಿದ್ದ ಹಿನ್ನಲೆ ಮತ್ತು ಭವಿಷ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳ ಪಾರಮ್ಯದ ಬಗ್ಗೆ ವಿಮರ್ಶೆ ಮಾಡಿ, ಹೊಸದಾಗಿ

ನಾವೇನು ತಯಾರು ಮಾಡಬಹುದು ಎಂಬ ಚಿಂತನೆ ನಡೆಸುತ್ತಾರೆ. ಆಗ ಅವರಿಗೆ ಹೊಳೆದದ್ದೇ ಪೆಟ್ರೋಲ್ ಸ್ಕೂಟರ್‌ಗಿಂತಲೂ ಹೆಚ್ಚು ವಿಶ್ವಾಸಾರ್ಹ ಎಲೆಕ್ಟ್ರಿಕ್ ಸ್ಕೂಟರ್ ಉತ್ಪಾದನೆಯ ಐಡಿಯಾ. ಆಗಲೇ ಕೆಲವು ಇವಿ ಸ್ಕೂಟರ್ ಕಂಪನಿಗಳಿದ್ದು, ಅವುಗಳಿಗಿಂತ ಭಿನ್ನವಾಗಿ ಏಥರ್

ಸ್ಕೂಟರ್ ಇರಬೇಕು ಎಂಬ ಏಕೈಕ ಧ್ಯೇಯ ಮತ್ತು ಕನಸು ಹೊತ್ತು ಇಬ್ಬರ ಶ್ರಮ, ಪ್ರಯತ್ನ ಆರಂಭವಾಗುತ್ತದೆ. ಇಬ್ಬರ ಉದ್ದೇಶ ಮತ್ತು ಗುರಿಯನ್ನು ಮನಗಂಡ ಫ್ಲಿಪ್‌ಕಾರ್ಟ್ ಸಂಸ್ಥಾಪಕರಾದ ಸಚಿನ್ ಬನ್ಸಲ್ ಮತ್ತು ಬಿನ್ನಿ ಬನ್ಸಲ್ ಏಥರ್ ಸಂಸ್ಥೆಗೆ 10 ಕೋಟಿ ಹಣ ಹೂಡುತ್ತಾರೆ. ಅಲ್ಲಿಂದ ಏಥರ್‌ನ ಬೆಳವಣಿಗೆಯ ವೇಗ ದುಪ್ಪಟ್ಟಾಗುತ್ತಾ ಸಾಗುತ್ತದೆ.

ತಾಳಿದವನು ಬಾಳಿಯಾನು

ಭಾರತದಲ್ಲಿ ಇಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಜನರು ಖರೀದಿ ಮಾಡುವುದಿಲ್ಲ, ಹೀಗಾಗಿ ಇದೊಂದು ನಷ್ಟದಾಯಕ ಉದ್ಯಮ ಎಂದು ವಿರೋಧಿಗಳು ಕೊಂಕು ಆರಂಭಿಸುತ್ತಾರೆ. ಇದು ಮೊದಲ ಮೂರ್ನಾಲ್ಕು ವರ್ಷ ನಿಜವೂ ಆಗುತ್ತದೆ. ಆದರೆ, ಮೆಹ್ತಾ-ಸ್ವಪ್ನಿಲ್ ಇದನ್ನೆಲ್ಲ ತಡೆದು ಏಥರ್ ಸ್ಕೂಟರ್‌ಗಳ ಉತ್ಪಾದನೆ, ಹೊಸ ಸಾಧ್ಯತೆ ಮತ್ತು ಮಾರ್ಕೆಟಿಂಗ್ ಕುರಿತಾಗಿ ಗಮನ ಕೊಡುತ್ತಾರೆ.

ತಾಳಿದವನು ಬಾಳಿಯಾನು ಎಂಬ ಮಾತು ಮೆಹ್ತಾ-ಸ್ವಪ್ನಿಲ್ ಬಾಳಿನಲ್ಲೂ ನಿಜವಾಗಿದ್ದು, ಏಥರ್ ಸಂಸ್ಥೆ ಇಂದಿಗೆ 700 ಕೋಟಿ ಮೌಲ್ಯದಷ್ಟು ಬೆಳೆದಿದೆ. 2022ರ ಒಂದೇ ವರ್ಷದಲ್ಲಿ ಬರೋಬ್ಬರಿ 400 ಕೋಟಿಯಷ್ಟು ಬೆಳವಣಿಗೆ ಕಂಡಿದೆ.

ಕೇವಲ ಎರಡೇ ಮಾಡೆಲ್‌ಗಳೊಂದಿಗೆ ಏಥರ್ ಸಾಧಿಸಿದ ಯಶಸ್ಸಿನ ಬಗ್ಗೆ ದೇಶ ವಿದೇಶದ ಕಂಪನಿಗಳು ಬೆರಗಾಗಿವೆ. ಇವಿ ಕ್ಷೇತ್ರದಲ್ಲಿ ಸಾಧನೆಯ ಕನಸು ಕಾಣುವವರಿಗೆ ಮೆಹ್ತಾ-ಸ್ವಪ್ನಿಲ್ ಮಾಡೆಲ್ ಆಗಿದ್ದಾರೆ. ಕನಸು ಎಂದರೆ ಮನದ ಬೆಳಕು!